ಭಿನ್ನವಾಗಿರಬಹುದು ಎನ್ನುವುದನ್ನು ಗ್ರಹಿಸಲೂ ಇದರಿಂದ ನಮಗೆ ಸಾಧ್ಯವಾಗಬಹುದು. ಶಾರುಖ್‌ನ ಸಿನಿಮಾಗಳು ಎಲ್ಲವನ್ನೂ ಭೇದಿಸಿ ಕ್ರಾಂತಿಕಾರಿಯಾಗುವುದನ್ನು ಪ್ರತಿಪಾದಿಸುವುದಿಲ್ಲ. ಬದಲಿಗೆ ಒಂದು ಚೌಕಟ್ಟಿನಲ್ಲಿದ್ದೇ ಸಂಬಂಧಗಳನ್ನು ಮರುಸೃಷ್ಟಿಸುವ, ಮರುನಿರೂಪಿಸುವ ಕೆಲಸವನ್ನು ಮಾಡುತ್ತವೆ. ಹೀಗಾಗಿ, ಮಹಿಳೆಯರು ಇದನ್ನು ನೋಡುವ ರೀತಿಯಲ್ಲಿಯೇ ಒಂದು ಭಿನ್ನತೆಯಿರಬಹುದು. ಆ ಭಿನ್ನತೆಯಲ್ಲಿಯೇ ಸ್ತ್ರೀವಾದವನ್ನು ಕ್ರಾಂತಿಕಾರಿ ಆಸ್ಫೋಟದಿಂದ ಈಚೆಗೆ ನೈಜತೆಯ ನೆಲೆಗೆ ಶ್ರಯಾನಾ ತಂದು ನಿಲ್ಲಿಸುತ್ತಾರೆ. ಅವರು ಚಿತ್ರಿಸಿರುವ ಮಹಿಳೆಯರು ಸಮಾನತೆಗಾಗಿ ಹೋರಾಡುವುದನ್ನೇ ಧ್ಯೇಯವಾಗಿ ಇರಿಸಿಕೊಂಡವರಲ್ಲ. ಬದಲಿಗೆ ಗಂಡಸರೊಂದಿಗೆ, ಸಮಾಜದೊಂದಿಗೆ ತಮ್ಮ ಸಂಬಂಧಗಳನ್ನು ಮರು ಪರಿಭಾಷಿಸುವಲ್ಲಿ ತೊಡಗುತ್ತಾರೆ.

ನಾವು ಕೇಳಬೇಕಾದ ಗಮ್ಮತ್ತಿನ ಪ್ರಶ್ನೆ ಇದು. ಶಾರುಖ್ ಯಾಕೆ? ಸಲ್ಮಾನ್ ಅಥವ ಅಮೀರ್ ಯಾಕಾಗಬಾರದು? ಶ್ರಯಾನಾ ಅದಕ್ಕೆ ಒಂದು ವಿವರವನ್ನು ಕೊಡುತ್ತಾರೆ. 'ಸಲ್ಮಾನ್ ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡುತ್ತಾನೆ, ಅಮೀರ್ ಅವರಿಗೆ ಪಾಠಪ್ರವಚನ–ಬೋಧನೆ ಮಾಡುತ್ತಾನೆ. ಆದರೆ, ಶಾರುಖ್ ನಮ್ಮನ್ನು ನೋಡುತ್ತಾನೆ. ನೋಡುವ ದೃಷ್ಟಿಯಲ್ಲಿಯೂ ಒಂದು ಘನತೆಯಿದೆ.' ಇದರ ಜೊತೆಗೆ ಆಶಯಗಳನ್ನೂ ನೋಡಿ – ಸಲ್ಮಾನ್ ಸಿನಿಮಾದವರ ಕುಟುಂಬದಿಂದ ಬಂದವನು. ಅಮೀರ್ ಕೂಡಾ ಅಷ್ಟೇ. ಇಬ್ಬರೂ ಮುಂಬಯಿಯವರು. ಆದರೆ, ಶಾರುಖ್ ಎಲ್ಲ ರೀತಿಯಿಂದಲೂ ಹೊರಗಿನವನು. ದೆಹಲಿಯಿಂದ ಬಂದವನು. ಟೀವಿಯಲ್ಲಿ ಮೊದಲು ನಟಿಸಿ ನಂತರ ಸಿನಿಮಾಕ್ಕೆ ಬಂದವನು. ಎಲ್ಲಕ್ಕಿಂತ ಮುಖ್ಯವಾಗಿ ಶಾರುಖ್ ತನ್ನ ಪತ್ನಿ ಗೌರಿಯನ್ನು ಹುಡುಕಿಬಂದು ವಿವಾಹವಾಗಿ ವಿಧೇಯನಾಗಿರುವವನು. ಸಲ್ಮಾನನ ಖಾಸಗಿ ಜೀವನದಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಸಾಕಷ್ಟು ಚರ್ಚೆಯಿದೆ. ಅಮೀರ್ ಎರಡು ಬಾರಿ ವಿಚ್ಛೇದನ ಮಾಡಿಕೊಂಡಿದ್ದಾನೆ. ಪ್ರತೀಕ ಮತ್ತು ಆಶಯಗಳ ಆಯ್ಕೆಯಲ್ಲಿಯೂ ಒಂದು ಅರ್ಥವಿರಲೇಬೇಕು. ಹೀಗಾಗಿಯೇ ಶ್ರಯಾನಾ ಆ ಪ್ರತೀಕವನ್ನು ಸಫಲವಾಗಿ ತಮ್ಮ ವಾದದೊಂದಿಗೆ ಬೆಸೆಯುವಲ್ಲಿ ಯಶಸ್ವಿಯಾಗುತ್ತಾರೆ.

ಸಮಾಜಶಾಸ್ತ್ರದ್ದೋ, ಮಾನವಶಾಸ್ತ್ರದ್ದೋ, ಮನರಂಜನೆಯದ್ದೋ, ಜೀವನ ಚರಿತ್ರೆಯೋ... ಯಾವ ಒಂದು ಪ್ರಭೇದಕ್ಕೂ ಸೇರದಂತೆ, ವಿವರಿಸಲು ಸಾಧ್ಯವಾಗದ, ಆದರೆ, ನಮ್ಮನ್ನು ಯೋಚನೆಗೀಡುಮಾಡುವ, ಆಳವಾಗಿ ತಟ್ಟುವ ಪುಸ್ತಕವನ್ನು ಶ್ರಯಾನಾ ಬರೆದಿದ್ದಾರೆ. ಅದು ಅಮೂರ್ತ ಎಂದು ನಿರೂಪಿಸಲು ಈಚಿನ ಸಂದರ್ಶನದಲ್ಲಿ ಆಕೆ ಕೊಟ್ಟ ಉತ್ತರವೇ ಸಮರ್ಪಕವಾಗಿರುತ್ತದೆ. 'ಈ ಪುಸ್ತಕ ಬರೆದ ನಂತರ ಶಾರುಖ್ ನಿಮ್ಮನ್ನು ಭೇಟಿಯಾಗಬಹುದು ಎನ್ನುವ ಆಲೋಚನೆಯಿತ್ತೇ?' ಎನ್ನುವ ಪ್ರಶ್ನೆಗೆ ಲೇಖಕಿ ಬಹಳ ಮಾರ್ಮಿಕವಾಗಿ ಉತ್ತರ ನೀಡಿದ್ದಾರೆ. 'ಇಲ್ಲ. ಈ ಪುಸ್ತಕ ಶಾರುಖ್‌ನ ಖಾಸಗಿ ಗ್ರಂಥಾಲಯದಲ್ಲಿ ಒಂದು ಸ್ಥಾನವನ್ನು ಪಡೆಯಬೇಕು. ನನ್ನ ಅಜ್ಜಿ ಇದನ್ನು ಓದಬೇಕು – ನನ್ನಲ್ಲಿ ಈ ಎರಡೇ ಆಶಯಗಳಿದ್ದವು' ಎಂದಿದ್ದಾರೆ. ಮೂರ್ತತೆಯನ್ನು ಧಿಕ್ಕರಿಸಿ ತಮ್ಮ ಅಮೂರ್ತ ಪ್ರತಿಮೆ, ಮತ್ತು ಆಶಯವನ್ನು ನಿರೂಪಿಸಿ ಇದಕ್ಕೆ ಒಂದು ಭಿನ್ನ ಮತ್ತು ಮಹಿಳೆಯರಿಗೆ ಪ್ರತ್ಯೇಕವಾದ ದೃಷ್ಟಿಕೋನವನ್ನು ಅವರು ನೀಡಿದ್ದಾರೆ. ಇದನ್ನು ಸಂಭ್ರಮಿಸದಿರುವುದಾದರೂ ಹೇಗೆ?

ಶಾರುಖ್‌ನ ತೆರೆದ ಬಾಹುಗಳು ಮಾತ್ರ ಕ್ಲೀಷೆಯಾಗದೇ ಒಂದು ಆಶಾವಾದ ಮತ್ತು ಸಾಧನೆಯ ಗುರಿಯಾಗಿ ನಿಲ್ಲುತ್ತದೆ. ಪಲಾಯನವಾದಿ ಎನ್ನುವಂತಹ ಸಂದರ್ಭದಲ್ಲೂ ಗಹನ ಅರ್ಥವನ್ನು ಕಂಡುಕೊಳ್ಳಲು ಈ ಪುಸ್ತಕ ನಮ್ಮನ್ನು ಪ್ರೇರೇಪಿಸುತ್ತದೆ.